**ಅಸಲು ದಾವೆ ಸಂಖ್ಯೆ -92/2021**
**ಡಿ.ಡಬ್ಲ್ಯೂ- 3**

**<u>ದಿನಾಂಕ 12-08-2026 ರಂದು ಸಾಕ್ಷಿಯವರಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲು : ಶ್ರೀ.ವಿ.ಬಿ.ಎಚ್ ವಕೀಲರಿಂದ ವಾದಿ ಪರವಾಗಿ</u>**

1.ನಾನು ಅನಕ್ಷರಸ್ಥೆ. ತಮಗೆ ತಮ್ಮ ಗಂಡನ ಮನೆಯ ಹೆಸರು ಅಡ್ಡ ಹೆಸರು ಜನವಾಡ ಮತ್ತು ಸಾರವಾನ ಎಂದು ಸಹ ಕರೆಯತ್ತಾರೆ ಎಂದರೆ ಕೇವಲ ಜನವಾಡ ಎಂದು ಮತ್ರ ಕೆರಯುತ್ತಾರೆ ಎಂದು ಹೇಳುತ್ತಾರೆ. ನಿಮ್ಮ ತಾಯಿಯವರಿಗೆ ಅವರ ತಂದೆ ಅಥವಾ ತಾಯಿಯಿಂದ ಸರ್ವೆ ನಂ.78/1 ಕ್ಷೇತ್ರ 3 ಏಕರೆ ಆಸ್ತಿ ಬಂದಿತ್ತು ಎಂದರೆ ಸರಿ. ಸದರಿ ಆಸ್ತಿಯನ್ನು ನಿಮ್ಮ ತಾಯಿಯವರು ಮಾರಾಟ ಮಾಡಿದ್ದು

ಅದಕ್ಕೆ ನೀವು ನಿಮ್ಮ ಸಹೋದರರಾದ ಆದಂ ಮತ್ತು ಕಾಶೀಂಸಾಬ ಇವರು ಸಹಿ ಮಾಡಿದ್ದಾರೆ ಎಂದರೆ ಸರಿ. ತಾವು ಯಾವ ಭಾಷೆಯಲ್ಲಿ ಸಹಿ ಮಾಡಿದಿರಿ ಎಂದರೆ ಸಾಕ್ಷಿಯು ಹೆಬ್ಬೆಟ್ಟಿನ ಗುರುತು ಹಾಕಿದ್ದೇನೆ ಎಂದು ಹೇಳುತ್ತಾರೆ. ಸದರಿ ಕ್ರಯದಸ್ತಿನಲ್ಲಿ ತಮ್ಮ ಹೆಬ್ಬೆಟ್ಟಿನ ಗುರುತಿನ ಪಕ್ಕದಲ್ಲಿ ಮತ್ತು ಕ್ರಯದಸ್ತಿನ ಕಂಡಿಕೆಗಳಲ್ಲಿ ತಮ್ಮ ಅಡ್ಡ ಹೆಸರು ಸಾರವಾನ ಎಂದು ನಮೂದಿಸಿದೆ ಎಂದರೆ ಸಾರವಾನ ನನ್ನ ಅಡ್ಡ ಹೆಸರು ಅಲ್ಲ ಎಂದು ಹೇಳುತ್ತಾರೆ. ಈ ದಾವೆಯನ್ನು ಯಾರು ಯಾರ ವಿರುದ್ದ ಸಲ್ಲಿಸಿದ್ದಾರೆ ಎಂದರೆ ಸಾಕ್ಷಿ ಆದಂ ಇವರು 5 ಜನರಾದ ಕಮಾಲಬಿ, ಕಾಸಿಂಸಾಬ, ರಾಜಬೀ, ಸೈಪನಸಾಬ ಮತ್ತು ನನ್ನ ವಿರುದ್ದ ಸಲ್ಲಿಸಿದ್ದಾರೆ ಎಂದು ಹೇಳುತ್ತಾರೆ. ಏನು ಪರಿಹಾರ ಕೋರಿ ದಾಖಲಾಸಿದ್ದಾರೆ ಎಂದರೆ ಮೋಸ ಆಗಿದೆ ಎಂದು ದಾವೆ ಸಲ್ಲಿಸಿದ್ದಾರೆ ಎಂದು ಸಾಕ್ಷಿ ಹೇಳುತ್ತಾರೆ. ನಿಮ್ಮ ತಂದೆ ಸೈಪುದ್ದೀನ ಜೀರಗಾಳ ಅವರ ತಂದೆ ಫಕ್ರುಸಾಬ ಜೀರಗಾಳ ಇವರಿಗೆ ಸರ್ವೆ ನಂ.60/1 ರ ಆಸ್ತಿ ಗೇಣಿದಾರ ಎಂದು ಬಂದಿತ್ತು ಎಂದರೆ ನನಗೆ ಗೊತ್ತಿಲ್ಲ. ಫಕ್ರುಸಾಬ ಅವರ ಗಂಡು ಮಕ್ಕಳ ಹೆಸರು ಮಹ್ಮದಸಾಬ ಮತ್ತು ಸೈಪನಸಾಬ ಆಗಿದ್ದು, ಹೆಣ್ಣುಮಕ್ಕಳ ಹೆಸರು ದಾದಿಬುಡ್ಡಿ, ಮಾಶಾಮಾ, ಖಟೇಲಮಾ, ಮರೆಮ್ಮಾ ಎಂದು ಸಾಕ್ಷಿ ಹೇಳುತ್ತಾರೆ. ಸದರಿ ಹೆಣ್ಣುಮಕ್ಕಳ ಗಂಡನ ಹೆಸರು ಮತ್ತು ಅಡ್ಡ ಹೆಸರು ನನಗೆ ಗೊತ್ತಿಲ್ಲ. ಆ ರೀತಿ 4 ಹೆಣ್ಣುಮಕ್ಕಳು ಇದ್ದ ಬಗ್ಗೆ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರಪಡಿಸಿದ್ದೀರಾ ಎಂದರೆ ಇಲ್ಲ ಎಂದು ಸಾಕ್ಷಿ ಹೇಳುತ್ತಾರೆ. ಫಕ್ರುಸಾಬ ಅವರು ತೀರಿಕೊಂಡ ನಂತರ ಅವರ ಮಕ್ಕಳಾದ ಸೈಪ್ಪುದ್ದೀನ ಮತ್ತು ಮಹ್ಮದಸಾಬ ಅವರ ಹೆಸರು ಕಂದಾಯ ದಾಖಲಾತಿಗಳಲ್ಲಿ ಬಂದಿತು ಎಂದರೆ ಸಾಕ್ಷಿ ನನ್ನ ಅಜ್ಜ ಪಕ್ರುಸಾಬ ಅವರಿಗಿಂತ ಮೊದಲು ನನ್ನ ತಂದೆ ಸೈಪುದ್ದೀನ ಅವರು ತೀರಿಕೊಂಡಿದ್ದಾರೆ ಎಂದು ಹೇಳುತ್ತಾರೆ. ನನ್ನ ತಂದೆಯವರು ತೀರಿಕೊಂಡ ದಿನಾಂಕ ಹೇಳಲು ಬರುವುದಿಲ್ಲ. ನನ್ನ ಅಜ್ಜ ಫಕ್ರುಸಾಬ ಅವರು ಯಾವ ದಿನಾಂಕದಂದು ತೀರಿಕೊಂಡರು ಎಂದು ನನಗೆ ಹೇಳಲು ಬರುವುದಿಲ್ಲ. ಈ ಪ್ರಕರಣದಲ್ಲಿ ತಕರಾರು ಸಲ್ಲಿಸಲು ಮಾಹಿತಿ ಯಾರು ನೀಡಿದರು ಎಂದರೆ ನಾನು ನೀಡಿಲ್ಲ ಎಂದು ಹೇಳುತ್ತಾರೆ. ಮುಖ್ಯ ವಿಚಾರಣಾ ಪ್ರಮಾಣ ಪತ್ರಕ್ಕೆ ಮಾಹಿತಿ ನಾನೇ ನೀಡಿದ್ದೇನೆ.

2.ನಿಮ್ಮ ಪರವಾಗಿ ನೀವು ಯಾವುದಾದರೂ ದಾಖಲಾತಿ ಹಾಜರಪಡಿಸಿದ್ದೀರಾ ಎಂದರೆ ಇಲ್ಲ ಎಂದು ಸಾಕ್ಷಿ ಹೇಳುತ್ತಾರೆ. ನಿಡಿ-10 ಯಾವ ಗ್ರಾಮದ್ದು ಮತ್ತು ಯಾವ ಡೈರಿ ನಂಬರ ಎಂದು ಸ್ಪಷ್ಟವಾಗಿ ಇಲ್ಲ ಎಂದರೆ ನನಗೆ ಗೊತ್ತಿಲ್ಲ. ನಿಡಿ-10 ದಾಖಲಾತಿ ನಿಜ ದಾಖಲಾತಿ ಹೌದೋ ಇಲ್ಲವೋ ಎಂದರೆ ಸರಿ ಇದೆ ಎಂದು ಸಾಕ್ಷಿ ಹೇಳುತ್ತಾರೆ. ನಿಡಿ-10 ದಾಖಲಾತಿಯಲ್ಲಿ ನಿಮ್ಮ ತಂದೆ ಅಥವಾ ಅವರ ತಂದೆ ತೀರಿಕೊಂಡ ದಿನಾಂಕ ನಿರ್ದಿಷ್ಟವಾಗಿ ನಮೂದು ಇಲ್ಲ ಎಂದರೆ ಸರಿ. ತಾವಾಗಲೀ, ವಾದಿ

ಪ್ರತಿವಾದಿ-1, ಪ್ರತಿವಾದಿ-4 ರವರಾಗಲೀ ನಿಮ್ಮ ತಂದೆ ಅಥವಾ ನಿಮ್ಮ ತಂದೆಯ ತಂದೆ ತೀರಿಕೊಂಡ ದಿನಾಂಕ ಪುಷ್ಠಿಕರಿಸಲು ಮರಣ ಪ್ರಮಾಣ ಪತ್ರ ಹಾಜರಪಡಿಸಿಲ್ಲ ಎಂದರೆ ಸರಿ. ಸಾಕ್ಷಿಗೆ ಈಗ ನಿಡಿ-10 ದಾಖಲಾತಿ ಓದಿ ಹೇಳಿದ್ದು, ಅದರಲ್ಲಿ ನೀವು ನಿಮ್ಮ ತಂದೆಯ ಮಗಳೆಂದು ನಿಮಗೆ ನಮೂದಿಸಿಲ್ಲ ಎಂದರೆ ಅದರಲ್ಲಿ ನನಗೆ ಹೆಸರು ಹಚ್ಚಿದ್ದಾರೆ ಇಲ್ಲವೋ ನನಗೆ ಗೊತ್ತಿಲ್ಲ ಎಂದು ಸಾಕ್ಷಿ ಹೇಳುತ್ತಾರೆ. ನಿಮ್ಮ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ನಿಮ್ಮ ತಂದೆ ಮತ್ತು ನಿಮ್ಮ ತಂದೆಯ ತಂದೆಯ ಮರಣದ ದಿನಾಂಕ ನಮೂದಿಸಿಲ್ಲ ಎಂದರೆ ಸರಿ. ನೀವು ನಿಮ್ಮ ಪ್ರತಿವಾದ ಪತ್ರದ ಕಂಡಿಕೆ 14 ರಲ್ಲಿ ಮಹ್ಮದಸಾಬ ಅವರೊಂದಿಗೆ ಆದಂಸಾಬ ಮತ್ತು ಕಾಶೀಸಾಬ ಅವರಿಗೆ ಆಸ್ತಿ ಬಂದಿದ್ದು ತಪ್ಪು ಎಂದು ನಮೂದಿಸಿದ್ದೀರಾ ಎಂದರೆ ಇಲ್ಲ ಎಂದು ಸಾಕ್ಷಿ ಹೇಳುತ್ತಾರೆ. ಸದರಿ ಕಂಡಿಕೆ 14 ರಲ್ಲಿ ನೀವು ಯಾವುದೇ ನೋಂದಾಯಿತ್ ದಾಖಲಾತಿ ಅಗದೇ ಇದ್ದ ಕಾರಣ ವಾದಿಗಾಗಲೀ, ಪ್ರತಿವಾದಿ-1 ರವರಾಗಾಗಲೀ ಮೂಲ ಸರ್ವೆ ನಂ.60/1 ರಲ್ಲಿ ಯಾವುದೇ ಹಕ್ಕು ಇಲ್ಲ ಎಂದು ನಮೂದಿಸಿದ್ದೀರಾ ಎಂದರೆ ಇಲ್ಲ ಎಂದು ಸಾಕ್ಷಿ ಹೇಳುತ್ತಾರೆ. ನಿಮಗೆ ಈ ಪ್ರಕರಣದಲ್ಲಿ ಸಾಕ್ಷ್ಯ ನುಡಿಯಲು ನಿಮ್ಮ ತಾಯಿ 4 ನೇ ಪ್ರತಿವಾದಿಯವರು ಯಾವುದಾದರೂ ಅಧಿಕಾರ ಪತ್ರ ನೀಡಿದ್ದಾರಾ ಎಂದರೆ ಇಲ್ಲ ಎಂದು ಸಾಕ್ಷಿ ಹೇಳುತ್ತಾರೆ. ನಿಮ್ಮ ಪ್ರಕಾರ 4 ನೇ ಪ್ರತಿವಾದಿಯ ಹಣದಿಂದ 3 ನೇ ಪ್ರತಿವಾದಿ 60/6 ರ ಆಸ್ತಿ ಖರೀದಿಸಿದ್ದಾನೆ ಎಂದು ಆದ ಕ್ರಯದಸ್ತಿಗೆ ತಾವು ಸಾಕ್ಷಿಯಾಗಿ ಸಹಿ ಮಾಡಿದ್ದೀರಾ ಎಂದರೆ ಇಲ್ಲ ಎಂದು ಸಾಕ್ಷಿ ಹೇಳುತ್ತಾರೆ.

3.ನನ್ನ ತಂದೆ ವರ್ಚಗಲ್ ಗ್ರಾಮದಲ್ಲಿ ತೀರಿಕೊಂಡಿದ್ದಾರೆ. ಸಾಮಾನ್ಯವಾಗಿ ಕ್ರಯದಸ್ತು ಆಗುವ ಸಾಕಷ್ಟು ದಿನಗಳ ಮೊದಲು ಮಾತುಕತೆ ಆಗುತ್ತವೆ ಎಂದರೆ ಯಾವುದೇ ಮಾತುಕತೆ ಆಗಿಲ್ಲ ಎಂದು ಹೇಳುತ್ತಾರೆ. 3 ನೇ ಪ್ರತಿವಾದಿಯ ಆದ ಕ್ರಯದಸ್ತಿಗೆ ಸಂಬಂಧಿಸಿದಂತೆ ಮಾತುಕತೆ ಯಾವಾಗ ಎಲ್ಲಿ ಆಯಿತು ಎಂದರೆ ಅದೆಲ್ಲ ನನಗೆ ಗೊತ್ತಿಲ್ಲ ಎಂದು ಸಾಕ್ಷಿ ಹೇಳುತ್ತಾರೆ. ಸದರಿ ಮಾತುಕತೆ ಸಮಯದಲ್ಲಿ ಯಾರು ಯಾರು ಇದ್ದರು ಎಂದು ನನಗೆ ಹೇಳಲು ಬರುವುದಿಲ್ಲ. ಕ್ರಯದಸ್ತು ಆಗುವ ಸಮಯದಲ್ಲಿ ನಾನು ಹಾಜರ ಇರಲಿಲ್ಲ. 3 ನೇ ಪ್ರತಿವಾದಿಯ ಹೆಸರಿನಲ್ಲಿ ಆಸ್ತಿ ಖರೀದಿಸುವುದಕ್ಕೆ ಹಣ ಎಲ್ಲಿಂದ ಬಂದಿತು ಎಂದು ತಮಗೆ ಗೊತ್ತಿಲ್ಲ ಎಂದರೆ ಸಾಕ್ಷಿ ನನ್ನ ತಾಯಿ ಹಣ ನೀಡಿದರು ಎಂದು ಮಾತ್ರ ಹೇಳುತ್ತಾರೆ. ನಿಮ್ಮ ತಾಯಿಯವರು ತಮ್ಮ ಆಸ್ತಿಯನ್ನು ಎಷ್ಟು ಮೊತ್ತಕ್ಕೆ ಮಾರಾಟ ಮಾಡಿದರು ಎಂದರೆ 3 ಲಕ್ಷ 25 ಸಾವಿರಕ್ಕೆ ಎಂದು ಹೇಳುತ್ತಾರೆ. 3 ನೇ ಪ್ರತಿವಾದಿ ಎಷ್ಟು ಮೊತ್ತಕ್ಕೆ ಆಸ್ತಿ ಖರೀದಿಸಿದನು ಮತ್ತು ಅದಕ್ಕೆ ಯಾರು ಯಾರು ಬಂದು ಸಹಿ ಮಾಡಿದರು ಎಂದು ನನಗೆ ಗೊತ್ತಿಲ್ಲ.

ಸಾಮಾನ್ಯವಾಗಿ ಒಬ್ಬ ವ್ಯಕ್ತಿ ಇನ್ನೊಬ್ಬ ವ್ಯಕ್ತಿಗೆ ಹಣ ನೀಡಬೇಕಾದರೆ ಕೈಗಡ ಪತ್ರ ಬರೆಸಿಕೊಳುತ್ತಾರೆ ಎಂದರೆ ಸರಿ. ಸಾಕ್ಷಿಗೆ ಈಗ ದಾವಾ ಆಸ್ತಿಗಳನ್ನು ಓದಿ ಹೇಳಿದ್ದು, ಅದರಲ್ಲಿ ನಿಮಗೆ ಪಾಲು ಇದೆಯೋ ಇಲ್ಲವೋ ಎಂದರೆ ಇಲ್ಲ ಎಂದು ಸಾಕ್ಷಿ ಹೇಳುತ್ತಾರೆ. ತಮಗೆ 4 ಜನ ಹೆಣ್ಣು ಮಕ್ಕಳು ಮತ್ತು ಕೊನೆಯದವನು ಗಂಡು ಮಗ ಎಂದರೆ ಸರಿ. ನಿಮ್ಮ ಗಂಡು ಮಗನ ಹೆಸರು ಬಂದೇನಮಾಜ ಎಂದರೆ ಸರಿ. ಬಂದೇನಮಾಜ ಅವರ ಮದುವೆ ನಿಮ್ಮ ತಾಯಿ ಆಸ್ತಿ ಮಾರುವ ಮೊದಲೇ ಆಗಿದೆ ಎಂದರೆ ಸರಿ. ಆದಂಸಾಬ ಅವರ 3 ಜನ ಹೆಣ್ಣುಮಕ್ಕಳಲ್ಲಿ ಕೊನೆಯ ಮಗಳಾದ ನಗೀನಾ ಅವರ ಮದುವೆಯನ್ನು ನಿಮ್ಮ ಮಗ ಬಂದೇನಮಾಜ ಅವರೊಂದಿಗೆ ಮಾಡಲು ಪ್ರಸ್ತಾಪಿಸಿದ್ದು ಅದನ್ನು ಆದಂ ಅವರು ತಿರಸ್ಕರಿಸಿದ್ದರು ಎಂದರೆ ಸರಿಯಲ್ಲ. ಆ ರೀತಿ ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಆದಂಸಾಬ ಅವರು ತಮ್ಮ ಮಗಳ್ನು ಕೊಡದೇ ಇದ್ದಾಗ ನೀವು ಕಾಶೀಂಸಾಬ ಅವರ 2 ನೇ ಮಗಳಾದ ಶೈನಾಜಬಿ ಅವರ ಮದುವೆ ನಿಮ್ಮ ಮಗ ಬಂದೇನಮಾಜ ಅವರೊಂದಿಗೆ ಮಾಡಿದಿರಿ ಎಂದರೆ ಸರಿ. ಆದಂಸಾಬ ಅವರು ತಮ್ಮ ಮಗಳನ್ನು ನೀಡದೇ ಇದ್ದಾಗ ಆತನ ಮೇಲೆ ಸಿಟ್ಟು ಇತ್ತು ಎಂದರೆ ಸರಿಯಲ್ಲ. ಆ ರೀತಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಕಾಶೀಂಸಾಬ ಅವರ ಮಗಳನ್ನು ನಿಮ್ಮ ಮಗನಿಗೆ ಮದುವೆ ಮಾಡಿಕೊಟ್ಟಿದ್ದರಿಂದ ಕಾಶೀಂಸಾಬ ಅವರ ಮೇಲಿನ ಪ್ರೀತಿ ವಿಶ್ವಾಸದಿಂದ ಆತನ ಮಗ 3 ನೇ ಪ್ರತಿವಾದಿಗೆ ಅನುಕೂಲವಾಗಲೀ ಎಂದು ಸುಳ್ಳು ಸಾಕ್ಷ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ನಿಮ್ಮ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ವಾದಿ ಮತ್ತು 1 ನೇ ಪ್ರತಿವಾದಿ ಪ್ರತ್ಯೇಕವಾಗಿ ಇದ್ದಾರೆ ಎಂದು ನಮೂದಿಸಿದ್ದೀರಾ ಎಂದರೆ 20 ರಿಂದ 25 ವರ್ಷಗಳಿಂದ ಪ್ರತ್ಯೇಕವಾಗಿ ಇದ್ದೇನೆ ಎಂದು ಹೇಳುತ್ತಾರೆ. ಆದಂ ಅವರ ಪಾಲಿಗೆ ಮನೆ ಬಂದಿದೆ ಎಂದು ಹೇಳಿದ್ದು, ಮನೆ ನಂಬರ ಹೇಳಬಹುದಾ ಎಂದರೆ ಇಲ್ಲ ಎಂದು ಸಾಕ್ಷಿ ಹೇಳುತ್ತಾರೆ. ನೀವು ದಾವಾ ಆಸ್ತಿ ಸಂಖ್ಯೆ 1 ಮತ್ತು 2 ನಿಮ್ಮ ಪ್ರಕಾರ 1 ನೇ ಪ್ರತಿವಾದಿ ಪಾಲಿಗೆ ಬಂದ ಬಗ್ಗೆ ಯಾವುದಾದರೂ ನೋಂದಾಯಿತ್ ವಿಭಾಗ ಪತ್ರ ನೋಡಿದ್ದೀರಾ ಎಂದರೆ ಇಲ್ಲ ಎಂದು ಸಾಕ್ಷಿ ಹೇಳುತ್ತಾರೆ. ತಾವು ಯಾವ ಆಧಾರದ ಮೇಲೆ ವಿಭಾಗ ಆಗಿದೆ ಎಂದು ನುಡಿಯುತ್ತಿದ್ದೀರಿ ಎಂದರೆ ಸಾಕ್ಷಿ ಅವರಿಬ್ಬರೇ ಮಾಡಿಕೊಂಡಿದ್ದಾರೆ ಎಂದು ಹೇಳುತ್ತಾರೆ. ಆದಂ ಮತ್ತು ಕಾಶೀಂಸಾಬ ಅವರ ನಡುವೆ ಯಾವುದೇ ನೋಂದಾಯಿತ್ ವಿಭಾಗ ಆಗಿಲ್ಲ ಎಂದರೆ ಇಲ್ಲ ಎಂದು ಸಾಕ್ಷಿ ಹೇಳುತ್ತಾರೆ. ಕಾಶೀಂಸಾಬ ಅವರ ಮೇಲಿನ ಪ್ರೀತಿ ವಿಶ್ವಾಸದಿಂದ ತಾವು ಅವರಿಗೆ ಅನುಕೂಲವಾಗಲೀ ಎಂದು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ, ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ನಿಮ್ಮ ಪ್ರಕಾರ 4 ನೇ ಪ್ರತಿವಾದಿ ನಿಮ್ಮ ತಾಯಿ 3 ನೇ ಪ್ರತಿವಾದಿಗೆ ಹಣ ನೀಡಿದ ಬಗ್ಗೆ ಯಾವುದೇ ದಾಖಲಾತಿಯನ್ನು ಅವರಾಗಲೀ ನೀವಾಗಲೀ ಹಾಜರಪಡಿಸಿಲ್ಲ ಎಂದರೆ ಸಾಕ್ಷಿ 3 ನೇ

ಪ್ರತಿವಾದಿ ಬಳಿ ಇರಬಹುದು ಎಂದು ಹೇಳುತ್ತಾರೆ. ನಿಮಗೆ ಆದಂಸಾಬ ಅವರ ಮೇಲೆ ಸಿಟ್ಟು ಇದಿದ್ದರಿಂದ ಮತ್ತು 1 ನೇ ಪ್ರತಿವಾದಿಯ ಮಗಳನ್ನು ನಿಮ್ಮ ಮಗನಿಗೆ ಮದುವೆ ಮಾಡಿಕೊಟ್ಟಿದ್ದು, ಆತನ ಮೇಲಿನ ಪ್ರೀತಿಯಿಂದ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ, ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

ಪ್ರತಿವಾದಿ-1, 2 ಮತ್ತು ಪ್ರತಿವಾದಿ-3 ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ಹೇಳುತ್ತಾರೆ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಅದೆ.

ಸಹಿ/-

ಸಾಕ್ಷಿಯ ಸಹಿ

ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು
ಜೆ.ಎಂ.ಎಫ್.ಸಿ., ಮುಧೋಳ